ಆ) ಈ ಬಗ್ಗೆ ಸರ್ಕಾರದ ಕ್ರಮವೇನು;

ಚಾಮರಾಜನಗರ ಮಾರುಕಟ್ಟೆಯಲ್ಲಿ ಅರಿಶಿನ ಬೆಳೆ ಖರೀದಿಗೆ ಖರೀದಿದಾರರು ಇರುವುದಿಲ್ಲ. ತಮಿಳುನಾಡಿನ ಈರೋಡಿಗೆ ಅರಿಶಿನ ಉತ್ಪನ್ನ ಮಾರಾಟಕ್ಕಾಗಿ ತೆಗೆದುಕೊಂಡು ಹೋಗಲಾಗುತ್ತಿದೆ.

ಪ್ರಸ್ತುತ ಅರಿಶಿನ ಬೆಳೆಗೆ ಹೆಚ್ಚಿನ ಖರೀದಿದಾರರು ಇರುವುದಿಲ್ಲ. ಖರೀದಿದಾರರು ಮುಂದೆ ಬಂದಲ್ಲಿ ಅರಿಶಿನ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗುವುದು.

ಇ) ಈ ಜಿಲ್ಲೆಯಲ್ಲಿ ಶೀಥಲ ಉಗ್ರಾಣ ತೆರೆಯುವ ಉದ್ದೇಶವಿದೆಯೇ;

ಪ್ರಸ್ತುತ ಇರುವುದಿಲ್ಲ.

ಈ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1256(1404)
ಸದಸ್ಯರ ಹೆಸರು :ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ)
ಉತ್ತರಿಸಬೇಕಾದ ಸಚಿವರು :ಶ್ರೀ ಶಶಿಕಾಂತ.ಅ.ನಾಯಿಕ (ತೋಟಗಾರಿಕೆ ಸಚಿವರು)

ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಬರುವ ಜಿಲ್ಲೆಗಳಾವುವು;

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಬರುವ ಜಿಲ್ಲೆಗಳು ಕೆಳಕಂಡಂತೆ ಇವೆ.

1. ಬೆಂಗಳೂರು (ಗ್ರಾ)
2. ತುಮಕೂರು
3. ಮೈಸೂರು
4. ಕೋಲಾರ
5. ಚಿತ್ರದುರ್ಗ
6. ಬೆಳಗಾಂ
7. ಬಾಗಲಕೋಟೆ
8. ಬಿಜಾಪುರ
9. ಕೊಡಗು

10. ಕೊಪ್ಪಳ
11. ಹಾಸನ
12. ಗುಲ್ಬರ್ಗಾ
13. ಉತ್ತರ ಕನ್ನಡ
14. ದಕ್ಷಿಣ ಕನ್ನಡ
15. ಉಡುಪಿ
16. ಶಿವಮೊಗ್ಗ
17. ಚಿಕ್ಕಮಗಳೂರು

ಆ) ಅತ್ಯಂತ ಹಿಂದುಳಿದ ಚಾಮರಾಜನಗರ ಜಿಲ್ಲೆ ಈ ಯೋಜನೆಗೆ ಸೇರಲ್ಪಟ್ಟಿದೆಯೇ?

ಇಲ್ಲ

ಇ) ಇಲ್ಲದಿದ್ದರೆ, ಈ ಜಿಲ್ಲೆಯನ್ನು ಈ ಯೋಜನೆಗೆ ಸೇರಿಸುವ ಉದ್ದೇಶ ಸರ್ಕಾರದ ಗಮನದಲ್ಲಿದೆಯೇ;

ಇಲ್ಲ

ಈ) ಈ ಯೋಜನೆಗೆ ಜಿಲ್ಲೆಗಳನ್ನು ಅಳವಡಿಸುವಾಗ ಅನುಸರಿಸುವ ಮಾನದಂಡಗಳೇನು

ಈ ಯೋಜನೆಗಾಗಿ ಜಿಲ್ಲೆಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್, ನವದೆಹಲಿಯು ಹೊಂದಿರುತ್ತದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಇರತಕ್ಕ ವಿಫುಲ ಸಾಮರ್ಥ್ಯಗಳು, ವೈವಿಧ್ಯಮಯ ಹವಾಮಾನ ಹಾಗೂ ಸಮೂಹ ದೃಷ್ಟಿಕೋನ ಇಟ್ಟುಕೊಂಡು ಹಾಗೂ ಪ್ರಾದೇಶಿಕ ಸಮತೋಲನತೆಯನ್ನು ಕಾಪಾಡುವ ಉದ್ದೇಶವನ್ನು ಆಧರಿಸಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮಾರ್ಗಸೂಚಿಯನ್ವಯ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿರುತ್ತದೆ.